ರಾಜ್ಯದಲ್ಲಿ ಪುರಸಭೆ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಬಗ್ಗೆ

೧೩೬೯. ಶ್ರೀಮತಿ ಸುಮಾವಸಂತ್ (**ವಿರಾಜಪೇಟೆ**).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯ ಪುರಸಭೆ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವಾಗ ಅನುಸರಿಸುವ ಕ್ರಮವೇನು ?

ಆ) ನೇಮಕ ಮಾಡುವ ಇಲಾಖೆ ಹಾಗೂ ಅಧಿಕಾರಿಗಳು ಯಾರು ?

ಇ) ಹೀಗೆ ನೇಮಕಗೊಂಡ ಶಿಕ್ಷಕರುಗಳಿಗೆ ವರ್ಷಾನುಗಟ್ಟಲೆ ಸಂಬಳ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ವಿರಾಜಪೇಟೆ ಪುರಸಭೆಯ ಶಾಲೆಯೊಂದರಲ್ಲಿ ಈ ರೀತಿ ನಡೆದಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ?

ಉ) ಬಂದಿದ್ದಲ್ಲಿ ಅದರ ಬಗ್ಗೆ ತೆಗೆದುಕೊಂಡು ಕ್ರಮವೇನು ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು)—

ಅ) ೧೯೭೧ರ ಕರ್ನಾಟಕ ಪುರಸಭೆಗಳು (ಅಧಿಕಾರಿಗಳ ಮತ್ತು ನೌಕರರ ನೇಮಕಾತಿ) ನಿಯಮಾವಳಿ ಅನ್ವಯ ನಗರ. ಪುರಸಭೆಗಳಲ್ಲಿ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ಮಾಡಲಾಗುತ್ತಿದೆ.

ಆ) ೫೯೦-೫೫೦ ರೂ.ಗಳ ಮತ್ತು ೪೧೦-೭೦೦ರೂ.ಗಳ ವೇತನದ ಹುದ್ದೆಗಳಿಗೆ ಸಂಬಂದಿಸಿದ ನಗರ. ಪುರಸಭೆಗಳು ೪೯೦-೯೫೦ರೂ.ಗಳ ೫೫೦-೧೦೫೦ರೂ.ಗಳ ಮತ್ತು ೬೩೦-೧೨೦೦ ರೂ.ಗಳ ವೇತನ ಹುದ್ದೆಗಳಿಗೆ ನಗರ ಸಭೆಗಳಿಗಾದರೆ ವಿಭಾಗಾಧಿಕಾರಿಗಳು ಪುರಸಭೆಗಳಿಗಾದರೆ ಜಿಲ್ಲಾಧಿಕಾರಿಗಳು ಮೇಲ್ಕಂಡ, ನಿಯಮಾವಳಿಯಂತೆ ನೇಮಕಾತಿ ಪ್ರಾಧಿಕಾರಿಗಳಾಗಿದ್ದಾರೆ.

ಇ) ಈವರೆವಿಗೂ ಬಂದಿರಲಿಲ್ಲ.

ಈ) ಈ ಪ್ರಶ್ನೆ ಕೇಳಿದ ನಂತರ ಸರ್ಕಾರದ ಗಮನಕ್ಕೆ ಬಂದಿದೆ.

ಉ) ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೈಗಾರಿಕಾ ವಿವಾದ ಕಾನೂನಿನ ಬಗ್ಗೆ ಇತ್ತೀಚಿನ ನ್ಯಾಯಾಲಯದ ತೀರ್ಪು

೧೩೪೧. ಶ್ರೀ ಎಂ. ಎಸ್. ಕೃಷ್ಣನ್ (**ರಾಜಾಜಿನಗರ**).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕೈಗಾರಿಕಾ ವಿವಾದ ಕಾನೂನಿನ ವಿಧಿ ೨೫-೦ ಅನ್ನು ನ್ಯಾಯಾಧೀಶ ಶ್ರೀ ರಾಮಜೋಯಿಸ ರವರು ರದ್ದು ಮಾಡಿ ತೀರ್ಪನ್ನಿತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ತೀರ್ಪಿನಿಂದಾಗಿ ರಾಜ್ಯದ ಕಾರ್ಮಿಕ ವರ್ಗದ ಹಿತಕ್ಕೆ ಧಕ್ಕೆ ಬಂದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಕಾರ್ಮಿಕ ವರ್ಗಕ್ಕೆ ನ್ಯಾಯ ದೊರಕಿಸಿಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಅತಿ ಮುಖ್ಯವಾದ ಸಂವಿಧಾನಕ್ಕೆ ಸಂಬಂಧಪಟ್ಟ ವಿಷಯಗಳು ಅಡಕವಾಗಿರುವುದರಿಂದ ಹಾಗೂ ಮಾಲೀಕರು ಕೆಲವು ಖ್ಯಾತ ವಕೀಲರನ್ನು ತಮ್ಮ ಪರವಾಗಿ ವಾದ ಮಾಡಲು ಕಾರ್ಮಿಕರಿಗೆ ನ್ಯಾಯ ದೊರಕದಂತಾಗಲು ನೇಮಕ ಮಾಡುತ್ತಿರುವುದರಿಂದ ಈ ಸವಾಲನ್ನೆದುರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?